ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆ ಸಾಮರ್ಥ್ಯ ಹೆಚ್ಚಿಸುವುದು.

1400 (1942)-ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಸಕ್ಕರೆ ಕಾರ್ಖಾನೆಗಳು ಮತ್ತು ಖಂಡಸಾರಿ ಘಟಕಗಳು ಎಷ್ಟು ಇವುಗಳ ಅರೆಯುವ ಸಾಮರ್ಥ್ಯ ಎಷ್ಟು

ಆ) ಈ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು?

ಇ) ಈಗಿರುವ ವ್ಯವಸ್ಥೆಯಲ್ಲಿ ಪೂರ್ಣ ಕಬ್ಬನ್ನು ಅರೆಯಲು ಸಾಧ್ಯವೇ?

ಈ) ಇಲ್ಲವಾದಲ್ಲಿ, ಸರ್ಕಾರವು ಕಬ್ಬನ್ನು ಅರೆಯಲು ಬದಲೀ ವ್ಯವಸ್ತೆ ಮಾಡಿದೆಯೇ? (ವಿವರ ನೀಡುವುದು)

ಶ್ರೀ ಉಮೇಶ ವಿ. ಕತ್ತಿ (ಸಕ್ಕರೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ 2 ಸಕ್ಕರೆ ಕಾರ್ಖಾನೆಗಳು ಹಾಗೂ 1 ಖಂಡಸಾರಿ ಘಟಕವಿದ್ದು ಅವುಗಳ ಅರೆಯುವ ಸಾಮರ್ಥ್ಯವು ಈ ಕೆಳಕಂಡಂತಿದೆ.

1) ಎರಡು ಸಕ್ಕರೆ ಕಾರ್ಖಾನೆಗಳು ಒಟ್ಟು ದಿನವಹಿ ಕಬ್ಬು ಅರೆಯುವ ಸಾಮರ್ಥ್ಯ
   - 5000 ಮೆ.ಟನ್

2) ಒಂದು ಖಂಡಸಾರಿ ಘಟಕದ ದಿನವಹಿ
   - 300 ಮೆ.ಟನ್

ಕಬ್ಬು ಅರೆಯುವ ಸಾಮರ್ಥ್ಯ(ಕಾರ್ಯಮಾಡುತ್ತಿರುವುದಿಲ್ಲ)

ಆ) 1996-97ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ 9.50 ಲಕ್ಷ ಟನ್ ಕಬ್ಬಿನ ಉತ್ಪಾದನೆ ಅಂದಾಜು ಮಾಡಲಾಗಿದೆ.

ಇ) ಇಲ್ಲಾ.

ಈ) ತುಂಗಭದ್ರಾ ಸಕ್ಕರೆ ಕಾರ್ಖಾನೆಯು (ದೇವಿಸುಗರ್ಸ್) ಸ್ಥಗಿತಗೊಡಿರುವುದರಿಂದ ಈ ಕಾರ್ಖಾನೆಯ ಪ್ರದೇಶದ ಕಬ್ಬನ್ನು ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ, ದಾವಣಗೆರೆ ಶುಗರ್ಸ್, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಗಳು ಎತ್ತುವಳಿ ಮಾಡುವ ವ್ಯವಸ್ಥೆ ಮಾಡಲಾಗಿದೆ. ಬೆಲ್ಲ ತಯಾರಿಕೆಯೂ ಈಗ ಲಾಭದಾಯಕವಾಗಿದ್ದು,

ಬೆಲ್ಲ ತಯಾರಿಕೆಗೂ ಕಬ್ಬು ಹೋಗುತ್ತಿರುವುದರಿಂದ ರೈತರು ಬೆಳೆದ ಕಬ್ಬಿಗೆ ವ್ಯವಸ್ಥೆ ಆಗಿ ಸಮಸ್ಯೆ ಉಂಟಾಗಿರುವುದಿಲ್ಲ. ಈಗಾಗಲೇ ಹಾಲಿ ಇರುವ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ವಿಸ್ತರಣೆಗೆ ಹಾಗೂ ಹೊಸದೊಂದು ಕಾರ್ಖಾನೆಯ ಸ್ಥಾಪನೆಗೆ ಕೇಂದ್ರ ಸರ್ಕಾರದ ಅನುಮತಿ ಪತ್ರ ದೊರೆತಿದ್ದು ಇವುಗಳು ಕಾರ್ಯರೂಪಕ್ಕೆ ಬರುತ್ತಿದ್ದಂತೆ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ಎಲ್ಲಾ ಕಬ್ಬಿಗೂ ಅರೆಯುವ ವ್ಯವಸ್ಥೆ ಉಂಟಾಗುವುದು.

ವಿಷಯ : ಭದ್ರಾವತಿಯಲ್ಲಿ ಎಂ.ಪಿ.ಎಂ. ಪಲ್ಪ್ ಬೆಳೆಯುವ ಭೂಮಿ ಮಂಜೂರಾತಿ.

1401 (1943)-ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭದ್ರಾವತಿಯಲ್ಲಿರುವ ಮೈಸೂರು ಪೇಪರ್ ಮಿಲ್ ಹಾಗೂ ಹರಿಹರ ಪಾಲಿ ಫೈಬರ್‌ಗಳಿಗೆ ಆಕೇಷಿಯಾ, ಯುಕೋ ಇತ್ಯಾದಿ ಪಲ್ಪ್ ಸಂಬಂಧಿತ ಮರ ಬೆಳೆಯಲು ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಎಕರೆ (ಅರಣ್ಯ) ಪಡೆಯಲಾಗಿದೆ, ಎಲ್ಲೆಲ್ಲಿ ಯಾವ ಸರ್ವೆ ನಂಬರುಗಳಿಲ್ಲಿ ಭೂಮಿ ಪಡೆಯಲಾಗಿದೆ.

ಆ) ಪರವಾನಗಿ ಪಡೆಯುವಾಗ ಸರ್ವೆ ಆಳತೆ ಮಾಡಿಸಿ ಪಡೆಯಲಾಗಿದೆಯೇ

ಇ) ಪರವಾನಗಿ ಇಲ್ಲದೆಯೇ ಖಾಸಗಿ ಜಮೀನಿನಲ್ಲಿ ಎಂ.ಪಿ.ಎಂ. ಹಾಗೂ ಹರಿಹರ ಪಾಲಿ ಫೈಬರ್ ಸಂಸ್ಥೆಗಳವರು ಪಲ್ಪ್ ಮರ ಬೆಳೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ ಇದರಿಂದ ಕಂಪನಿಗಳಿಗೆ ಆದ ಹಾನಿ ಎಷ್ಟು? (ವಿವರ ನೀಡುವುದು)

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು.)

ಅ) ಭದ್ರಾವತಿಯ ಎಂ.ಪಿ.ಎಂ. ಸಂಸ್ಥೆಗೆ 1980ನೇ ಇಸವಿಯಲ್ಲಿ ಸುಮಾರು 75,000 ಎಕರೆ ಬೀಳುಬಿಟ್ಟ ಹಾಗೂ ಕ್ಷೀಣಿಸಿದ ಅರಣ್ಯ ಪ್ರದೇಶಗಳನ್ನು ಗುತ್ತಿಗೆ ಆಧಾರದ ಮೇಲೆ 40 ವರ್ಷಗಳ ಕಾಲಕ್ಕೆ ನೀಡಲಾಗಿದೆ. ಇದರಲ್ಲಿ ಬಹುಪಾಲು ಶಿವಮೊಗ್ಗ ಜಿಲ್ಲೆಯಲ್ಲಿದ್ದು, ಅಲ್ಪ ಭಾಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುತ್ತದೆ. ಸರ್ವೆನಂಬರುಗಳ ವಿವರಗಳನ್ನು ನಂತರ ಒದಗಿಸಲಾಗುವುದು.